ಹೋಗಿದ್ದಾಳೆ. ನಾಳೆ ಮದುವೆ ಮುಗಿಸಿಕೊಂಡು ಬರ್ತಾಳೆ, ಹೀಗಾಗಿ ನನ್ನದೇ ಪಾಕ' ಎಂದು ನಕ್ಕರು.

'ಕಾಫಿ ಹಿತವಾಗಿದೆ ಈ ವೆದರ್‌ಗೆ' ಎಂದೆ ಆಸ್ವಾದಿಸುತ್ತ.

'ಬೇರೆ ಯಾವುದಾದರೂ ಕಣ್ಣಿಗೆ ಬಿದ್ದರಾ?'

'ಇಲ್ಲ ಮಾವ' ಮುಖ ಬೇರೆ ಕಡೆ ತಿರುಗಿಸಿದೆ.

'ಸಮಯ ಕೂಡಿ ಬರುವತನಕ ಪಕ್ಕದಲ್ಲೇ ಇದ್ದರೂ ಕಾಣಿಸೋಲ್ಲ, ನನ್ನ ಅಂದಾಜು ಇನ್ನು ನಾಲ್ಕು ತಿಂಗಳಲ್ಲಿ ನಿನ್ನ ಲಗ್ನ ಆಗಬೇಕು ನೋಡೋಣ, ದೇವರಿದ್ದಾನೆ' ಎಂದಾಗ ಶುಷ್ಕ ನಗೆ ನಕ್ಕೆ.

ನನ್ನ ನಿರ್ಧಾರ ತಿಳಿಸುವುದು ಕೊಂಚ ತಡವಾಗಿತ್ತು. ಅಷ್ಟರಲ್ಲೇ ದಿಶಾಳನ್ನು ಇನ್ನೊಬ್ಬ ಒಪ್ಪಿಯಾಗಿತ್ತು. ಛೇ, ಬಿಟ್ವೀನ್ ಲಿಪ್ ಅಂಡ್ ಸಿಪ್ ಅಂದರೆ ಇದೇನೇ? ಸ್ವಲ್ಪದರಲ್ಲಿ ಜಾರಿತ್ತು.

ಮಳೆಯ ಆರ್ಭಟ ಕಡಿಮೆಯಾದಾಗ ಶಂಭು ಮಾವನಿಂದ ಬೀಳ್ಕೊಂಡು ಹೊರಟೆ.

***

ಅಪ್ಪ ಕಾಶಿಯಾತ್ರೆ ಮಾಡಬೇಕೆಂಬ ಕೋರಿಕೆ ಇಟ್ಟಾಗ ವಿಮಾನದಲ್ಲಿ ಕರೆದೊಯ್ಯುವ ಎನ್ನಿಸಿ ಕುಳಿತಲ್ಲಿಯೇ ಅದರ ವಿವರಗಳನ್ನು ನೋಡುತ್ತಿದ್ದೆ. ಭಾನುವಾರವಾದ್ದರಿಂದ ಯಾವುದಕ್ಕೂ ಅವಸರವಿಲ್ಲ. ಕರೆಗಂಟೆ ಸದ್ದಾದಾಗ ಎದ್ದು ಬಾಗಿಲು ತೆಗೆದೆ.

ಶಂಭು ಮಾವ!

'ನೀನು ಇರ್ತಿಯೋ ಇಲ್ವೋ ಅಂದ್ಕೊಂಡೇ ಬಂದೆ ಸದ್ಯ' ಸೋಫಾದಲ್ಲಿ ಕುಳಿತರು.

'ಒಂದು ಲೋಟ ನೀರು ಸಾಕು, ಆಮೇಲೆ ಕಾಫಿ' ಎಂದು ತಾವೇ ಲೋಟದಲ್ಲಿ ನೀರು ತುಂಬಿಸಿಕೊಂಡು ಕುಡಿದರು. ಅಷ್ಟರ ಮಟ್ಟಿಗೆ ವಿಶ್ವಾಸ ನಮ್ಮ ಮನೆಯಲ್ಲಿ.

'ಮುಖ್ಯವಾದ ಕೆಲಸವಿತ್ತೇನೋ?'

'ಏನಿಲ್ಲ ಮಾವ, ಕಾಶೀಯಾತ್ರೆಗೆ ಫ್ಲೈಟ್ ಬುಕ್ ಮಾಡ್ತಿದ್ದೆ. ಅಪ್ಪ ಅಮ್ಮನ್ನ ಕರ್ಕೊಂಡು ಹೋಗುವ ಪ್ಲಾನ್ ಆಮೇಲೆ ಮಾಡಿದರಾಯಿತು' ಎಂದು ಕಂಪ್ಯೂಟರ್ ಮುಚ್ಚಿ ಅವರ ಮುಂದೆ ಕುಳಿತೆ.

'ನೀಲಕಂಠ, ಅದೇ ದಿಶಾಳ ತಂದೆ... ಬರಬಹುದು ಇನ್ನೊಂದು ಅರ್ಧ ಗಂಟೇಲಿ.'

ಇಲ್ಲಿಗೆ ನನ್ನನ್ನು ನೋಡಲು ಬರುವುದೆಂದರೆ...

ದಿಶಾಳ ಮದುವೆಗೆ ಏನಾದರೂ ಇವೆಂಟ್‌ಮ್ಯಾನೇಜ್‌ಮೆಂಟ್ ನನಗೇ ಆಫರ್ ಮಾಡಬಹುದೆ? ಆಗಲಿ, ಒಬ್ಬ ಗ್ರಾಹಕ ಸಿಕ್ಕಂತಾಯ್ತು, ಗರಿಷ್ಠ ರಿಯಾಯಿತಿ ಕೊಡಿಸಿದರಾಯ್ತು.

'ಮೊನ್ನೆ ನಡೆಯಬೇಕಿದ್ದ ಲಗ್ನಪತ್ರಿಕೆ ನಿಂತುಹೋಯ್ತು. ಏನೂ ಬೇಡ ಅಂತ ಹೇಳ್ತಿದ್ದವರು ಕೊನೆಯ ಗಳಿಗೇಲಿ ವಿಪರೀತ ಬೇಡಿಕೆ ಇಟ್ಟಿದ್ದರಂತೆ ಗಂಡಿನ ಕಡೆಯವರು. ಹುಡುಗನೂ ಕೋಲೆ ಬಸವನ ಹಾಗೆ ಹಿರಿಯರು ಹೇಳಿದ್ದಕ್ಕೆಲ್ಲ ಗೋಣಾಡಿಸಿದ್ದನಂತೆ. ಈಗಲೇ ಹೀಗಾದರೆ ನಾಳೆ ಮದುವೆಯಾದಮೇಲೆ ಹೇಗೋ ಅನ್ನೋ ದಿಗಿಲು ಹುಡುಗಿ ಮನೆಯವರಿಗೆ. ಹೀಗಾಗಿ ಆ ಸಹವಾಸವೇ ಬೇಡ ಅಂತ ಕೈ ತೊಳೆದುಕೊಂಡರು.'

'ಓಹ್...' ನನ್ನ ಕುತೂಹಲ ಹೆಚ್ಚಾಯಿತು.

'ಕಂಠಿ ನನ್ನ ಹತ್ತಿರ ಹೇಳ್ಕೊಂಡು ಬೇಸರಿಸಿಕೊಂಡ. ನನಗೆ ನಿನ್ನ ನೆನಪಾಯ್ತು. ಒಮ್ಮೆ ನಿನ್ನನ್ನು ಬೇಡ ಅಂದಿದ್ದಾರಲ್ಲ? ಅದೇ ಅವರಿಗೆ ಹಿಂಜರಿಕೆ, ನಾನು ಮಾತಾಡ್ತೀನಿ ಬಾ ಅಂತ ಹೇಳಿದ್ದೀನಿ. ನಿನ್ನ ಅಭಿಪ್ರಾಯದಲ್ಲಿ ಯಾವ ಬದಲಾವಣೆ ಇಲ್ಲ ಅಂದುಕೊಂಡಿದ್ದೀನಿ...'

'ನನಗೆ ಅಡ್ಡಿಯಿಲ್ಲ ಮಾವ' ಎಂದೆ ಈ ಬಾರಿ ತಡಮಾಡದೆ.

'ಕಾಶಿಯಾತ್ರೆಗೆ ಮೊದಲು ಕಂಠಿಯ ಕನ್ಯಾಸೆರೆ ಬಿಡಿಸುವುದು ಖಾತರಿ ಅಲ್ವೇ?' ನಕ್ಕರು.

ನನಗೋ ಅವ್ಯಕ್ತ ಆನಂದ.

'ಅವರು ಬರುವುದರೊಳಗೆ ಉಡುಗೆ ಬದಲಿಸು' ನನ್ನ ಬರ್ಮುಡಾ ಗಮನಿಸಿ ಹೇಳಿದರು.

'ಆಯಿತು ಮಾವ' ಎಂದು ರೂಮಿಗೆ ಹೋದೆ.

'ನಿಮ್ಮದಲ್ಲದ್ದು ನಿಮ್ಮದಾಗುವುದು ಸಾಧ್ಯವಿಲ್ಲ' ಟ್ಯಾಕ್ಸಿವಾಲಾನ ಮಾತು ಅನುರಣಿಸಿತು, ಅಂತೆಯೇ, ನನ್ನದು ಬೇರೆಯವರದಾಗಲೂ ಸಾಧ್ಯವಿಲ್ಲ! ಎಷ್ಟು ಸತ್ಯ!

ಅನುತ್ತೀರ್ಣನಾಗಿದ್ದವ ಮರು ಮೌಲ್ಯಮಾಪನದಲ್ಲಿ ಮೊದಲ ಸ್ಥಾನ ಗಿಟ್ಟಿಸಿದ ಸಂಭ್ರಮ! ದಿಶಾಳ ತಂದೆಯನ್ನು ಎದುರುಗೊಳ್ಳಲು ಸಜ್ಜಾದೆ. ■





# ಗೀಳು

■ ಸವಿತಾ ನಾಗಭೂಷಣ

ಕೃಷಿ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ರಂಗಪ್ಪನವರು ಕೆಲಸದಿಂದ ನಿವೃತ್ತರಾಗಿ ಕೆಲವೇ ತಿಂಗಳುಗಳು ಕಳೆದಿವೆ. ನಿವೃತ್ತ ಜೀವನವನ್ನು ಆನಂದದಿಂದ ಕಳೆಯಬೇಕೆಂದಿದ್ದ ಅವರು ಎರಡು ತಿಂಗಳ ಹಿಂದೆ, ಅವರ ಹದಿಹರೆಯದ ಒಬ್ಬಳೇ ಮಗಳು ನೀಲಾ ಕೆಟ್ಟ ಜ್ವರದಿಂದ ಬಳಲಿ ಸಕಾಲದಲ್ಲಿ ಏನೆಲ್ಲಾ ಚಿಕಿತ್ಸೆ ಕೊಡಿಸಿದರೂ ಫಲನೀಡದೆ ತೀರಿಕೊಂಡಾಗಿನಿಂದ ಗರ ಬಡಿದವರಂತೆ ಆಗಿದ್ದಾರೆ.

ರಂಗಯ್ಯನವರಿಗೆ ಶುಗರ್ ಇಲ್ಲ. ಆದರೂ ಅವರು ಇತ್ತೀಚೆಗೆ ಸಕ್ಕರೆ ಹಾಕಿದ ಯಾವ ಪದಾರ್ಥವನ್ನೂ ತಿನ್ನುತ್ತಿಲ್ಲ. ಅವರಿಗೆ ಬಿ.ಪಿ. ಇಲ್ಲ. ಆದರೆ ಉಪ್ಪು ಕಡಿಮೆ ಮಾಡಿ ಸಪ್ಪೆ ಊಟ ಮಾಡಲು ಶುರು ಮಾಡಿದ್ದಾರೆ. ಯಾವ ಯಾವ ತರಕಾರಿ–ಹಣ್ಣುಗಳಲ್ಲಿ ಏನೇನು ಪೋಷಕಾಂಶ ಇದೆ ಎಂದು ಅರಿತು ತಿನ್ನುವುದು, ಪದೇ ಪದೇ ಲ್ಯಾಬ್‌ಗೆ ಹೋಗಿ ಫುಲ್ ಚೆಕಪ್ ಮಾಡಿಸಿಕೊಳ್ಳುವುದೂ ನಡೆದಿದೆ.

ಪತ್ರಿಕೆಗಳಲ್ಲಿ ಬರುವ ಸತ್ತ ಸುದ್ದಿಗಳನ್ನು ಅವರು ಮೊದಲು ಓದುತ್ತಾರೆ. ಇತ್ತೀಚೆಗೆ ನಗರ ಒಂದರ ಚಿತ್ರಮಂದಿರದಲ್ಲಿ ಬೆಂಕಿ ಬಿದ್ದು ಸಜೀವ ದಹನದ ಲೈವ್ ಟಿ.ವಿ.ಯಲ್ಲಿ ಪ್ರಸಾರವಾದಾಗ ನೀರು ಸಹ ಸೇವಿಸದೆ ಇಡೀ ದಿನ ಟಿ.ವಿ.ಗೆ ಕಣ್ಣು ಕೀಲಿಸಿ ನೋಡಿದ್ದೂ ಇದೆ. ನಿವೃತ್ತರಾದ ಮೇಲೆ ಹಿಮಾಲಯ ಪ್ರವಾಸ ಹೋಗಬೇಕು ಅಂತ ಇದ್ದ ಅವರು ಈಗ ಹೋಗುವ ಆಸೆ ಬಿಟ್ಟಿದ್ದಾರೆ. ಬಂಡೆಗಳ ಕುಸಿತ, ಹಿಮಪಾತ, ಚಳಿಗಾಳಿ ಹೀಗೆ ಏನೇನೋ ಯೋಚನೆ. ಗಾಳಿಗೋ ಮಳೆಗೋ ಮರದ ಕೊಂಬೆ ಕಡಿದು ತಲೆಯ ಮೇಲೆ ಬಿದ್ದರೆ ಎಂದು ಮರಗಳ ಅಡಿ ಹೋಗುವುದನ್ನೇ ಕಡಿಮೆ ಮಾಡಿದ್ದಾರೆ. ಮೊದಲು ಆರಾಮಾಗಿ ಟೀ ಮಾಡಿಕೊಂಡು ಕುಡಿಯುತ್ತಿದ್ದ ಅವರು ಗ್ಯಾಸ್ ಒಲೆ ಹಚ್ಚಲೂ ಅಂಜುತ್ತಿದ್ದಾರೆ.

ಯಾವಾಗಲೂ ತಮ್ಮ ತಮ್ಮ ಬಂಧುಗಳಲ್ಲಿ ಯಾರು ಯಾರು ಹೇಗೆ ಸತ್ತರು ಎಂಬ ತನಿಖೆಯಲ್ಲಿ ತೊಡಗಿ ತಮ್ಮ ಪತ್ನಿ ಶಾರದಮ್ಮನವರನ್ನು ಹೈರಾಣಾಗಿಸಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಮಂಚದಿಂದ ಉರುಳಿ ಬಿದ್ದು ಮೂಳೆ ಮುರಿದು, ಹಾಗೇ ನವೆದು ಸಾಯುವ ಭಯ, ಅಕಸ್ಮಾತ್ ತಿರುಗುವ ಪಂಖ ತಲೆ ಮೇಲೆ ಬಿದ್ದರೆ ಎಂಬ ಭಯ. ಯಾರೋ ಕೂತಲ್ಲೇ ಹೋದರಂತೆ, ಮತ್ತಾರೋ ಮಲಗಿದಲ್ಲೇ ಹೋದರಂತೆ ಎಂಬ ವಿಷಯ ಕೇಳಿ ಕೂರಲು ಭಯ, ನಿಲ್ಲಲೂ ಭಯ, ಮಲಗಲೂ ಭಯ.

ಚಾಕು–ಚೂರಿ–ಹಗ್ಗ ಕಂಡರೆ ಏನೋ ಕಳವಳ. ಬಾವಿ, ಕೆರೆ, ಬೆಟ್ಟ ನೆನಪಿಗೆ ತಂದುಕೊಂಡು ಹೇಗೆಹೇಗೋ ಆಡುವರು.

ಯಂತ್ರ–ತಂತ್ರ–ಮಂತ್ರ–ವೈದ್ಯರು–ಮನೋವೈದ್ಯರ ಹತ್ತಿರ ಸಮಾಲೋಚನೆ–ಚಿಕಿತ್ಸೆ ಕೊಡಿಸಿದರೂ ಅಭಯವಿಲ್ಲ!

ಯಾರಾದರೂ ಬಂಧುಗಳು ಬಂದು ಸಮಾಧಾನ ಹೇಳತೊಡಗಿದರೆ ಅವರ ಮನೆಯ ಸಾವಿನ ಕತೆ ಕೆದಕಿ ಮತ್ತಷ್ಟು ಅಶಾಂತರಾಗುತ್ತಾರೆ.

ಮನೆಯೊಳಗೂ ಇರಲಾರರು ಹೊರಗೂ ಹೋಗಲಾರರು. ನಿದ್ದೆಯಿಲ್ಲದೆ ರಾತ್ರಿಗಳು. ಯಾರೋ ಬೆನ್ನ ಹಿಂದೆ ನಿಂತ ಹಾಗೆ, ಇದ್ದಕ್ಕಿದ್ದ ಹಾಗೆ ಯಾರೋ 'ಬಾ' ಎಂದು ಕೈ ಸನ್ನೆ ಮಾಡಿ ಕರೆದ ಹಾಗೆ...

ಈ ದಿನಗಳಲ್ಲಂತೂ ತಾನು ಉಸಿರಾಡುತ್ತಿರುವೆನೋ ಇಲ್ಲವೋ, ತನ್ನ ಎದೆ ಏರಿಳಿಯುತ್ತಿದೆಯೋ ಇಲ್ಲವೋ, ತಮ್ಮ ಮೈ ಬಿಸಿ ಇದೆಯೋ ಇಲ್ಲವೋ ಎಂದು ಪದೇ ಪದೇ ನೋಡಿಕೊಳ್ಳುವರು!

ಅವರು ಹೆಚ್ಚು ದಿನ ಬದುಕುವುದಿಲ್ಲ ಎಂದು ಅವರನ್ನು ನೋಡಿದ ಎಲ್ಲರೂ ಈಗೀಗ ಅಂದುಕೊಳ್ಳುತ್ತಿರುವರು. ■